**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**ಪ್ರಪತ್ರ–24**

**[45(1) (ಡಿ) ನೇ ನಿಯಮವನ್ನು ನೋಡಿ]**

**ಮತದಾರರ ಮಾರ್ಗದರ್ಶನಕ್ಕಾಗಿ ಸೂಚನೆಗಳು**

*______________________ ಚುನಾವಣಾ ಕ್ಷೇತ್ರದಿಂದ ______________________ **ಗ್ರಾಮ / ತಾಲ್ಲೂಕು / ಜಿಲ್ಲಾ ಪಂಚಾಯತಿಗೆ ಚುನಾವಣೆ.

ಇದರೊಡನೆ ಕಳುಹಿಸಿರುವ ಮತಪತ್ರದ ಮೇಲೆ ಯಾರ ಹೆಸರುಗಳನ್ನು ಮುದ್ರಿಸಲಾಗಿದೆಯೊ ಆ ವ್ಯಕ್ತಿಗಳು ಮೇಲ್ಕಂಡ ಚುನಾವಣೆಯ ಅಭ್ಯರ್ಥಿಗಳಾಗಿದ್ದಾರೆ. ನೀವು ಮತ ಚಲಾಯಿಸಲು ಇಚ್ಛಿಸಿದರೆ, ನಿಮ್ಮ ಮತವನ್ನು ಈ ಕೆಳಗಿನ ಭಾಗ 1 ರಲ್ಲಿ ಕೊಟ್ಟಿರುವ ನಿರ್ದೇಶನಗಳಿಗೆ ಅನುಸಾರವಾಗಿ ದಾಖಲು ಮಾಡತಕ್ಕುದು ಮತ್ತು ಆ ತರುವಾಯ, ಭಾಗ 2 ರಲ್ಲಿ ವಿವರಿಸಿರುವ ಸೂಚನೆಗಳನ್ನು ಅನುಸರಿಸತಕ್ಕದ್ದು.

**ಭಾಗ 1**

**ಮತದಾರರಿಗೆ ನಿರ್ದೇಶನಗಳು**

1. ಚುನಾಯಿಸಬೇಕಾದ ಸದಸ್ಯರ ಸಂಖ್ಯೆ ______________ ಆಗಿದೆ.
2. ನಿಮಗೆ ______________ ಮತ/ ಮತಗಳು ಮಾತ್ರ ಇವೆ.
3. ನೀವು ______________ ಸಂಖ್ಯೆಯ ಅಭ್ಯರ್ಥಿಗಳಿಗಿಂತ ಹೆಚ್ಚಿನವರಿಗೆ ಮತ ಚಲಾಯಿಸಬಾರದು ಹಾಗೆ ನೀವು ಮಾಡಿದರೆ ನಿಮ್ಮ ಮತಪತ್ರವನ್ನು ತಿರಸ್ಕರಿಸಲಾಗುವುದು.
4. ನೀವು ಯಾರಿಗೆ ಆ ಮತವನ್ನು ಚಲಾಯಿಸಬೇಕೆಂದು ಇಚ್ಛಿಸುವಿರೋ ಆ ಅಭ್ಯರ್ಥಿಯ ಹೆಸರಿನ ಎದುರಿಗೆ ಸ್ಪಷ್ಟವಾಗಿ ಒಂದು ಗುರುತನ್ನು ಹಾಕುವುದರ ಮೂಲಕ ಮತವನ್ನು ದಾಖಲು ಮಾಡಿ.
5. ನಿಮ್ಮ ಮತವನ್ನು ನೀವು ಯಾವ ಅಭ್ಯರ್ಥಿಗೆ ಕೊಡುವಿರೋ ಅದನ್ನು ಸ್ಪಷ್ಟವಾಗಿ ಮತ್ತು ಸಂಶಯಾತೀತವಾಗಿ ತೋರಿಸುವ ಹಾಗೆ ಗುರುತನ್ನು ಹಾಕಬೇಕು. ನೀವು ಯಾವ ಅಭ್ಯರ್ಥಿಗೆ ಮತವನ್ನು ಕೊಟ್ಟಿರುವಿರಿ ಎಂಬ ಬಗ್ಗೆ ಸಂಶಯ ಬರುವಂತೆ ಗುರುತನ್ನು ಹಾಕಿದ್ದರೆ, ಆ ಮತವು ಕಾನೂನು ಮಾನ್ಯವಲ್ಲವಾಗುತ್ತದೆ.
6. 4ನೇ ಪ್ಯಾರಾಕ್ಕೆ ಅನುಸಾರವಾಗಿ ಅದರ ಮೇಲೆ ಮೊದಲು ತಮ್ಮನ್ನು ಅಗತ್ಯಪಡಿಸಿರುವಂಥ ಗುರುತಲ್ಲದೆ ನಿಮ್ಮ ಸಹಿ ಮಾಡುವುದಾಗಲೀ ಅಥವಾ ಯಾವುದೇ ಪದವನ್ನು ಬರೆಯುವುದಾಗಲೀ ಅಥವಾ ಯಾವುದೇ ಗುರುತು, ಚಿಹ್ನೆ ಅಥವಾ ಬರಹವನ್ನು ಮಾಡುವುದಾಗಲೀ ಮಾಡಬೇಡಿ.
7. ಮತದಾರನು 21ನೇ ನಮೂನೆಯಲ್ಲಿನ ಘೋಷಣೆಗೆ ಮಾಡಿದ ತನ್ನ ಸಹಿಗೆ ಮ್ಯಾಜಿಸ್ಟ್ರೇಟ್ ಅಥವಾ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಣ ಪಡೆಯಬೇಕು ಅಥವಾ
   (ಎ) ಅವನು ಒಕ್ಕೂಟದ ಸಶಸ್ತ್ರ ಪಡೆಗಳ ಅಥವಾ ರಾಜ್ಯದ ಸಶಸ್ತ್ರ ಪೊಲೀಸ್ ಪಡೆಯ ಸದಸ್ಯನಾಗಿದ್ದು, ಆದರೆ ಅವನು, ಆ ರಾಜ್ಯದ ಹೊರಗಡೆ ಸೇವೆಯನ್ನು ಸಲ್ಲಿಸುತ್ತಿದ್ದರೆ, ಸಂದರ್ಭಾನುಸಾರ ಆ ಮತದಾರ ಅಥವಾ ಅವಳ ಗಂಡನು ನಿಯೋಜಿತನಾಗಿರುವಂಥ ಘಟಕ, ಹಡಗು, ಅಥವಾ ಸ್ಥಾಪನೆಯ ಕಮಾಂಡಿಂಗ್ ಆಫೀಸರನು ಈ ಬಗ್ಗೆ ನೇಮಕ ಮಾಡಬಹುದಾದಂಥ ಅಧಿಕಾರಿಯಿಂದ,

   (ಬಿ) ಅವನು ಚುನಾವಣಾ ಕರ್ತವ್ಯದ ಮೇಲಿದ್ದರೆ, ಯಾವುದೇ ಗೆಜೆಟೆಡ್ ಅಧಿಕಾರಿಯಿಂದ ಅಥವಾ ಅವನು ಚುನಾವಣಾ ಕರ್ತವ್ಯದ ಮೇಲಿರುವಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಯಿಂದ,

   (ಸಿ) ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದ (4)ನೇ ಉಪ ಪ್ರಕರಣದ ಉಪಬಂಧಗಳು ಅನ್ವಯಿಸುವ ಹುದ್ದೆಯಾಗಿದೆಯೆಂದು ಘೋಷಿಸಿರುವ ಹುದ್ದೆಯನ್ನು ಅವನು ಧಾರಣ ಮಾಡಿದ್ದರೆ, ಸರ್ಕಾರದ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯದಲ್ಲದ ದರ್ಜೆಯ ಅಧಿಕಾರಿಯಿಂದ, ಮತ್ತು

   (ಡಿ) ಅವನು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿದ್ದರೆ, ಅವನು ಸ್ಥಾನಬದ್ಧತೆಯಲ್ಲಿರುವಂಥ ಕಾರಾಗೃಹದ ಸೂಪರಿಂಟೆಂಡ್ ರವರಿಂದ ಅಥವಾ ಸ್ಥಾನಬದ್ಧತಾ ಶಿಬಿರದ ಕಮಾಂಡಂಟ್‌ನಿಂದ ದೃಢೀಕರಣ ಪಡೆಯತಕ್ಕದ್ದು.

## ಭಾಗ–II

**ಮತದಾರರಿಗೆ ಸೂಚನೆಗಳು**

(ಎ) ನೀವು ನಿಮ್ಮ ಮತಪತ್ರದ ಮೇಲೆ ಮತವನ್ನು ದಾಖಲು ಮಾಡಿದ ತರುವಾಯ, ಇದರೊಂದಿಗೆ ಕಳುಹಿಸಿದ ಗುರುತು ಮಾಡಿದ ಅದೇ ರೀತಿಯ ಲಕೋಟೆಯಲ್ಲಿ ಮತಪತ್ರವನ್ನಿಟ್ಟು, ಲಕೋಟೆಯನ್ನು ಮುಚ್ಚಿ ಮೊಹರು ಮಾಡುವ ಮೂಲಕ ಅಥವಾ ಅನ್ಯಥಾ ಅದನ್ನು ಭದ್ರಪಡಿಸಿ.

(ಬಿ) ಆ ತರುವಾಯ ನೀವು ಇದರೊಂದಿಗೆ ಕಳುಹಿಸಿದ 21 ನೇ ಪ್ರಪತ್ರದಲ್ಲಿನ ಘೋಷಣೆಗೂ ಸಹ ಮ್ಯಾಜಿಸ್ಟ್ರೇಟ್ ಅಥವಾ ನಿಮ್ಮ ಸಹಿಯನ್ನು ದೃಢೀಕರಿಸಲು ಸಕ್ಷಮನಾದ ಯಾರೇ ಇತರ ಅಧಿಕಾರಿಯ ಸಮ್ಮುಖದಲ್ಲಿ (ಮೇಲ್ಕಂಡ 7ನೇ ನಿರ್ದೇಶನವನ್ನು ನೋಡಿ) ನೀವು ಸಹಿ ಮಾಡಬೇಕು. ಆ ಘೋಷಣೆಯನ್ನು ಅಂತಹ ಯಾವನೇ ಅಧಿಕಾರಿಯ ಬಳಿಗೆ ತೆಗೆದುಕೊಂಡು ಹೋಗಿ, ಮತ್ತು ನಿಮ್ಮ ಗುರುತಿನ ಬಗ್ಗೆ ಅವರು ಮನದಟ್ಟು ಮಾಡಿಕೊಂಡ ತರುವಾಯ ಅವರ ಸಮ್ಮುಖದಲ್ಲಿ ಅದಕ್ಕೆ ರುಜು ಮಾಡಿ, ಆ ಅಧಿಕಾರಿಯು ನಿಮ್ಮ ಸಹಿಯನ್ನು ದೃಢೀಕರಿಸಿ ಆ ಘೋಷಣೆಯನ್ನು ನಿಮಗೆ ಹಿಂತಿರುಗಿಸುತ್ತಾರೆ. ನೀವು ದೃಢೀಕರಿಸಿದ ಅಧಿಕಾರಿಗೆ ನಿಮ್ಮ ಮತಪತ್ರವನ್ನು ತೋರಿಸಕೂಡದು ಅಥವಾ ಅವರಿಗೆ ನೀವು ಹೇಗೆ ಮತದಾನ ಮಾಡಿರುವಿರಿ ಎಂಬ ಬಗ್ಗೆ ಹೇಳಕೂಡದು.

(ಸಿ) ಅನಕ್ಷರತೆ, ಅಂಧತ್ವ ಅಥವಾ ಇತರ ದುರ್ಬಲತೆಯ ಕಾರಣದಿಂದಾಗಿ ಮೇಲೆ ಸೂಚಿಸಲಾಗಿರುವ ರೀತಿಯಲ್ಲಿ ತಾನೇ ಸ್ವತಃ ಮತಪತ್ರಕ್ಕೆ ಗುರುತು ಮಾಡಲು ಮತ್ತು ಘೋಷಣೆಗೆ ರುಜು ಮಾಡಲು ಅಸಮರ್ಥರಾಗಿದ್ದರೆ ನಿಮ್ಮ ಪರವಾಗಿ (ಬಿ) ಬಾಬಿನಲ್ಲಿ ಉಲ್ಲೇಖಿಸಿದ ಯಾರೇ ಅಧಿಕಾರಿಯಿಂದ ನಿಮ್ಮ ಮತಪತ್ರಕ್ಕೆ ಗುರುತು ಹಾಕಿಸಿಕೊಳ್ಳಲು ಮತ್ತು ಘೋಷಣೆಗೆ ರುಜುವನ್ನು ಹಾಕಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತೀರಿ. ಅಂಥ ಅಧಿಕಾರಿಯ ನಿಮ್ಮ ಕೋರಿಕೆಯ ಮೇರೆಗೆ ನಿಮ್ಮ ಸಮ್ಮುಖದಲ್ಲಿ ಮತ್ತು ನಿಮ್ಮ ಇಚ್ಛಾನುಸಾರವಾಗಿ ಆ ಮತಪತ್ರಕ್ಕೆ ಗುರುತು ಮಾಡುವುದು. ಈ ಬಗ್ಗೆ ಅವರು ಅವಶ್ಯವಾಗಿರುವ ಪ್ರಮಾಣಪತ್ರವನ್ನು ಸಹ ಭರ್ತಿ ಮಾಡುವುದು.

(ಡಿ) (ಬಿ) ಬಾಬು ಅಥವಾ (ಸಿ) ಬಾಬಿಗೆ ಅನುಸಾರವಾಗಿ ನಿಮ್ಮ ಘೋಷಣೆಗೆ ಸಹಿ ಹಾಕಿದ ಮೇಲೆ ಮತ್ತು ನಿಮ್ಮ ರುಜುವನ್ನು ದೃಢೀಕರಿಸಿದ ತರುವಾಯ 21ನೇ ಪ್ರಪತ್ರದಲ್ಲಿರುವ ಘೋಷಣೆಯನ್ನು ಮತ್ತು ಮತಪತ್ರವನ್ನು ಒಳಗೊಂಡಿರುವ ಎ ಎಂದು ಗುರುತು ಮಾಡಿರುವ ಚಿಕ್ಕ ಲಕೋಟೆಯನ್ನು ಕೂಡ ಬಿ ಎಂದು ಗುರುತು ಮಾಡಿರುವ ದೊಡ್ಡ ಲಕೋಟೆಯಲ್ಲಿ ಇಡಿ. ದೊಡ್ಡ ಲಕೋಟೆಯನ್ನು ಮುಚ್ಚಿದ ತರುವಾಯ, ಅದನ್ನು ಅಂಚೆಯ ಮೂಲಕ ಅಥವಾ ದೂತನ ಮೂಲಕ ಆ ರಿಟರ್ನಿಂಗ್ ಅಧಿಕಾರಿಗೆ ಕಳುಹಿಸಿ ಬಿ ಎಂದು ಗುರುತು ಮಾಡಿರುವ ಲಕೋಟೆಯ ಮೇಲೆ ಒದಗಿಸಿರುವ ಜಾಗದಲ್ಲಿ ನೀವು ನಿಮ್ಮ ಪೂರ್ಣ ಸಹಿ ಮಾಡಬೇಕು ನೀವು ಯಾವುದೇ ಅಂಚೆ ಚೀಟಿಯನ್ನು ಅಂಟಿಸಬೇಕಾಗಿಲ್ಲ.

(ಇ) ಲಕೋಟೆಯು ರಿಟರ್ನಿಂಗ್ ಅಧಿಕಾರಿಗೆ ____________________ ರಂದು ____________________ ಗೆ ಮುಂಚೆ ತಲುಪಿತೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

(ಎಫ್) ದಯವಿಟ್ಟು ಗಮನಿಸಿ.

i. ಮೇಲೆ ಸೂಚಿಸಿದ ರೀತಿಯಲ್ಲಿ ನಿಮ್ಮ ಘೋಷಣೆಯನ್ನು ದೃಢೀಕರಿಸಲು ಅಥವಾ ಪ್ರಮಾಣೀಕರಿಸಲು ನೀವು ತಪ್ಪಿದರೆ, ನಿಮ್ಮ ಮತಪತ್ರವನ್ನು ತಿರಸ್ಕರಿಸಲಾಗುತ್ತದೆ.

ii. ಲಕೋಟೆಯು, ರಿಟರ್ನಿಂಗ್ ಅಧಿಕಾರಿಗೆ ದಿನಾಂಕ + ________________________________________ ರಂದು ____________________ ಸಮಯದ ತರುವಾಯ ತಲುಪಿದರೆ ನಿಮ್ಮ ಮತವನ್ನು ಎಣಿಸಲಾಗುವುದಿಲ್ಲ.

* ಚುನಾವಣೆಯ ಸಮುಚಿತ ವಿವರಗಳನ್ನು ಇಲ್ಲಿ ಸೇರಿಸಿ.

** ಸಮುಚಿತವಲ್ಲದ ಪರ್ಯಾಯಗಳನ್ನು ಹೊಡೆದು ಹಾಕಿ.

\+ ಮತಗಳ ಎಣಿಕೆಯ ಪ್ರಾರಂಭಕ್ಕಾಗಿ ನಿಗದಿಪಡಿಸಿದ ವೇಳೆ ಮತ್ತು ದಿನಾಂಕವನ್ನು ಇಲ್ಲಿ ನಿರ್ದಿಷ್ಟಪಡಿಸಿ.

ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ